## ಸ್ಕೋಪ್ ಸಂಸ್ಥೆ

'ಸೊಸೈಟಿ ಫಾರ್ ಕಮ್ಯುನಿಟಿ ಪಾರ್ಟಿಸಿಪೇಶನ್ ಎಂಡ್ ಎಂಪೊವರಮೆಂಟ್' (ಸ್ಕೋಪ್) ಒಂದು ಲಾಭಕ್ಕಲ್ಲದ ಸಂಸ್ಥೆ. ಧಾರವಾಡದಲ್ಲಿ ಮುಖ್ಯ ಕಚೇರಿಯನ್ನು ಹೊಂದಿರುವ ಸ್ಕೋಪ್ ಸಂಸ್ಥೆಯನ್ನು 2000ನೇ ಇಸವಿಯಲ್ಲಿ, ಹಲವು ವೃತ್ತಿಪರರು ಸೇರಿ ಪ್ರಾರಂಭಿಸಿದರು.

ಸುಸ್ಥಿರ ಜೀವನೋಪಾಯ, ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ, ಸುಧಾರಿತ ಜೀವನ ಗುಣಮಟ್ಟ ಹಾಗೂ ಪರಿಸರ ಅಭಿವೃದ್ಧಿಯನ್ನಾಧರಿಸಿದ ಗ್ರಾಮೀಣಾಭಿವೃದ್ಧಿ ಸ್ಕೋಪ್‌ನ ಗುರಿ.

ಸಮುದಾಯದ ಸಂಘಟನೆ, ಸಾಮರ್ಥ್ಯವರ್ಧನೆಗಳ ಮೂಲಕ ಸಮುದಾಯವನ್ನು ಕ್ರಿಯಾಶೀಲಗೊಳಿಸುವುದೇ ಸಂಸ್ಥೆಯ ಉದ್ದೇಶ.

### MISSION OF SCOPE

SCOPE will create opportunities of sustainable improved livelihood for the rural communities, especially the poor, women and other disadvantaged sections of the society, through community mobilization, empowerment and participation.

This will be achieved by assisting people to choose appropriate technologies for improved management of natural resources for better livelihood.

SCOPE will assist the communities to achieve better environment, quality of life and value system.

**SCOPE**

(Society for Community Participation & Empowerment)

**Arghyam**

Safe, sustainable water for all

# ಸ್ಕೋಪ್ – ಅರ್ಘ್ಯಂ

# ನೀರು–ನೈರ್ಮಲ್ಯ ಫೆಲೋಶಿಪ್










ಸ್ಕೋಪ್ ಸಂಸ್ಥೆ, ಬೆಟದೂರ ಕಂಪೌಂಡ್, ಮಾಳಮಡ್ಡಿ, ಧಾರವಾಡ–580007
ದೂರವಾಣಿ: 0836–2445044, e-mail: watsan@scope-india.org

ಇಂದು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅರ್ಧದಷ್ಟು ಜನರಿಗೆ ಉತ್ತಮ ನೈರ್ಮಲ್ಯದ ಸವಲತ್ತುಗಳಿಲ್ಲ, ನೈರ್ಮಲ್ಯದ ಕೊರತೆಯ ಆಗಾಧತೆಯೇ ಅತಿ ದೊಡ್ಡ ಸಮಸ್ಯೆ. ಜಗತ್ತಿನಲ್ಲಿ ಸುಮಾರು 260 ಕೋಟಿ ಜನ ನೈರ್ಮಲ್ಯದ ಕೊರತೆ ಅನುಭವಿಸುತ್ತಿದ್ದಾರೆ, ನೂರು ಕೋಟಿ ಜನರಿಗೆ ಸರಿಯಾದ ಕುಡಿಯುವ ನೀರಿಲ್ಲ. ಕೊರತೆಯನ್ನು 1990ರ ಮಟ್ಟದ ಅರ್ಧಕ್ಕಿಳಿಸುವ ಸಹಸ್ರಮಾನದ ಅಭಿವೃದ್ಧಿಯ ಗುರಿ ತಲುಪಬೇಕಾದರೆ, 2015ನೇ ಇಸವಿಯವರೆಗೆ ಪ್ರತಿವರ್ಷವೂ 12 ಕೋಟಿ ಜನರಿಗೆ ಸುಧಾರಿಸಿದ ನೈರ್ಮಲ್ಯ ಒದಗಿಸಬೇಕು.

ನಾವು ಗುರಿಯನ್ನು ತಲುಪಿದೆವೆಂದರೂ 180 ಕೋಟಿ ಜನರಿಗೆ ಆಗಲೂ ಉತ್ತಮ ನೈರ್ಮಲ್ಯ ಲಭ್ಯವಿರಲಾರದು. ಗುರಿಯಲ್ಲಿ ಒಂದೊಂದು ಪ್ರತಿಶತ ಕೊರತೆಯೂ ಮಾನವ ಅಭಿವೃದ್ಧಿಯಲ್ಲಿ ದೊಡ್ಡ ಹಿನ್ನಡೆ ಹಾಗೂ ಹಲವು ಕೋಟಿ ಜನರಿಗೆ ಅನಾರೋಗ್ಯ. ಸಾವಿರ–ಸಾವಿರ ಸಂಖ್ಯೆಯಲ್ಲಿ ಮಕ್ಕಳ ಸಾವು.

### ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ನಾವೆಲ್ಲಿದ್ದೇವೆ?

- ಒಟ್ಟೂ 177 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 126ನೆಯ ಸ್ಥಾನದಲ್ಲಿದೆ.
- ದೇಶದ 15 ಮುಖ್ಯ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 7 ನೆಯ ಸ್ಥಾನದಲ್ಲಿದೆ.
- ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ತೀರ ಕೆಳಗಿರುವ 5 ಜಿಲ್ಲೆಗಳಲ್ಲಿ 4 ಜಿಲ್ಲೆಗಳು ಉತ್ತರ ಕರ್ನಾಟಕದವು.
- ಆರೋಗ್ಯ ಸೂಚ್ಯಂಕ (Health Index)ದಲ್ಲಿ ತೀರ ತಳದಲ್ಲಿರುವ 5 ಜಿಲ್ಲೆಗಳಲ್ಲಿ ಎಲ್ಲವೂ ಉತ್ತರ ಕರ್ನಾಟಕದವು.

ಉತ್ತರ ಕರ್ನಾಟಕದಲ್ಲಿ ನೀರು ಹಾಗೂ ನೈರ್ಮಲ್ಯದ ಕೊರತೆ ಬಲು ದೊಡ್ಡ ಸಮಸ್ಯೆ. ಹಾಗಾಗಿಯೇ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ (HDI) ಈ ಪ್ರದೇಶದ ಜಿಲ್ಲೆಗಳು ತೀರ ಕೆಳಗಿರುವುವು. ನೀರು ಹಾಗೂ ನೈರ್ಮಲ್ಯ (water and sanitation) ಮಾನವ ಜೀವನದ ಗುಣಮಟ್ಟದ ಮುಖ್ಯ ನಿರ್ಣಾಯಕಗಳು. ಉತ್ತಮ ಮಾನವ ಸಂಪನ್ಮೂಲದ ಕೊರತೆ ಅಭಿವೃದ್ಧಿಯ ಈ ಘಟಕದ ಮುಖ್ಯ ಸಮಸ್ಯೆ.

ಈ ಹಿನ್ನೆಲೆಯಲ್ಲಿ **"ಸ್ಕೋಪ್ ಸಂಸ್ಥೆ"** ನೀರು ಹಾಗೂ ನೈರ್ಮಲ್ಯದ ವಿಷಯದಲ್ಲಿ ಕೆಲಸಮಾಡಬಲ್ಲ ನಾಯಕತ್ವವನ್ನು ರೂಪಿಸುವ ಉದ್ದೇಶದಿಂದ **"ವ್ಯಾಟ್‌ಸಾನ್ ಫೆಲೊಷಿಪ್"** (ನೀರು–ನೈರ್ಮಲ್ಯ ಫೆಲೊಷಿಪ್) ಎಂಬ ಹೊಸ ಪ್ರಯೋಗವನ್ನು ಬೆಂಗಳೂರಿನ **"ಅರ್ಘ್ಯಂ"** ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರಾರಂಭಿಸಿದೆ.

ಅಭಿವೃದ್ಧಿಯ ಹಿನ್ನೆಲೆಯುಳ್ಳ, ನೀರು–ನೈರ್ಮಲ್ಯದಲ್ಲಿ ಕೆಲಸ ಮಾಡಬೇಕೆಂಬ ಅದಮ್ಯ ಆಸೆಯುಳ್ಳ ನಾಲ್ಕು ಅಭ್ಯರ್ಥಿಗಳನ್ನು ಮೊದಲನೇ ಫೆಲೊಷಿಪ್‌ಗೆ ಆಯ್ಕೆ ಮಾಡಲಾಗಿದೆ. ಹದಿನೆಂಟು ತಿಂಗಳ ಕಾಲ, ಸ್ಕೋಪ್ ಸಂಸ್ಥೆಯ ಮಾರ್ಗದರ್ಶನದಲ್ಲಿ ಈ ಫೆಲೋಗಳು

1. ನೀರು ಹಾಗೂ ನೈರ್ಮಲ್ಯ ದ ತಾಂತ್ರಿಕ ವಿಷಯಗಳಲ್ಲಿ ದೇಶದ ಹಲವು ಭಾಗಗಳಲ್ಲಿ ಅತ್ಯುತ್ತಮ ಕೆಲಸ ಮಾಡುತ್ತಿರುವ ಸಂಸ್ಥೆಗಳಿಂದ ತರಬೇತಿ ಪಡೆಯಲ್ಲಿದ್ದಾರೆ.
2. ಅಭಿವೃದ್ಧಿಯಲ್ಲಿ ಹಲವು ದಶಕಗಳಿಂದ ನಿಸ್ಪೃಹ ಸೇವೆ ಸಲ್ಲಿಸುತ್ತಿರುವ ಮಹನೀಯರಿಂದ ಸ್ಫೂರ್ತಿದಾಯಕ ಮಾರ್ಗದರ್ಶನ ಹೊಂದಲಿದ್ದಾರೆ.
3. ಗದಗ ಜಿಲ್ಲೆಯ ಕೆಲವು ಗ್ರಾಮ ಪಂಚಾಯತಿಗಳನ್ನು ತಮ್ಮ ಕರ್ಮ–ಭೂಮಿಯಾಗಿಸಿಕೊಂಡು, ಅಲ್ಲಿಯ ಜನರೊಡನೆ, ಪಂಚಾಯತಿಗಳೊಡನೆ ಸೇರಿ, ಜನರು ಪಾಲ್ಗೊಳ್ಳುವಂತೆ ಮಾಡಿ, ಅಲ್ಲಿಯ ನೀರು–ನೈರ್ಮಲ್ಯದ ಸಮಸ್ಯೆಗಳನ್ನು ಜನರ ದೃಷ್ಟಿಯಿಂದ ಅರ್ಥಮಾಡಿಕೊಳ್ಳಲ್ಲಿದ್ದಾರೆ.
4. ಸ್ಥಳೀಯ ಸಮಸ್ಯೆಗಳಿಗೆ ಪರಿಹಾರವನ್ನು ಸಮುದಾಯದ ಪಾಲುದಾರಿಕೆಯಲ್ಲಿ ಯೋಜಿಸಲಿದ್ದಾರೆ. (Participator Action Plan).
5. ಕ್ರಿಯಾಯೋಜನೆಯಲ್ಲಿ ಹೊರಹೊಮ್ಮಿದ ಚಟುವಟಿಕೆಗಳಲ್ಲಿ ಆದ್ಯತೆಯ ಒಂದು ಸಮಸ್ಸೆಗೆ, ಜನರೊಡನೆ ಪರಿಹಾರ ಕ್ರಮ ಕೈಗೊಳ್ಳಲಿದ್ದಾರೆ.

ಇವೆಲ್ಲವುಗಳ ಫಲವಾಗಿ ಫೆಲೊಗಳು ನೀರು–ನೈರ್ಮಲ್ಯದ ವಿಷಯದಲ್ಲಿ ಈ ಪ್ರದೇಶಕ್ಕೆ ಬೇಕಾದ, ಒಳನೋಟಗಳನ್ನು, ಜ್ಞಾನವನ್ನು ಪಡೆದು, ಜನರೊಡನೆ ಕೆಲಸ ಮಾಡಲು ಬೇಕಾದ ನಮ್ರತೆಯನ್ನು ಹೊಂದಿ, ಈ ಕ್ಷೇತ್ರದಲ್ಲಿ ನಾಯಕತ್ವ ಒದಗಿಸಬೇಕೆಂಬುದು ಸಂಸ್ಥೆಯ ಉದ್ದೇಶ.



